**ಕರ್ನಾಟಕ ವಿಧಾನ ಪರಿಷತ್ತು**

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2014
2) ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 24.03.2022
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರ್ನಾಟಕ ಸರಕು ಮತ್ತು ಸೇವೆಗಳ ಕಾಯಿದೆ ಅನ್ವಯ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆಯೇ: ಹಾಗಿದ್ದಲ್ಲಿ, ಇದರ ಧ್ಯೇಯೋದ್ದೇಶಗಳು ಏನು ಮತ್ತು ಈ ನಿಧಿಗೆ ಸಂಗ್ರಹವಾಗುವ ತೆರಿಗೆಗಳ ಮೂಲ ಯಾವುದು:<br>(ಪೂರ್ಣ ಮಾಹಿತಿ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಆಇ 12 ಸಿಎಸ್‌ಎಲ್ 2019 ದಿನಾಂಕ: 10.04.2019 ರನ್ವಯ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆ, 2017 ರ ಪ್ರಕರಣ 57ರಲ್ಲಿ ಪ್ರಸ್ತಾಪಿಸಿರುವಂತೆ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆ.<br><br>ಸರಕು ಮತ್ತು ಸೇವೆಗಳ ಗ್ರಾಹಕರ ಕಲ್ಯಾಣ ಕಾರ್ಯಕ್ರಮಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ಹಣಕಾಸಿನ ನೆರವನ್ನು ಒದಗಿಸುವುದು ಮತ್ತು ಕ್ರಮಗಳನ್ನು ಜಾರಿಗೆ ತರುವುದನ್ನು ಒಳಗೊಂಡಿರುತ್ತದೆ.<br><br>1. ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಪ್ರಕರಣ 54(5)ರ ಪ್ರಕಾರ ಮರು ಪಾವತಿಗಾಗಿ ಕ್ಲೇಮ್ ಮಾಡಿರುವ ಮೊತ್ತದ ಪೂರ್ಣ ಅಥವಾ ಭಾಗವನ್ನು ಮರುಪಾವತಿ ಮಾಡಬಹುದೆಂದು ನಿರ್ಧಾರವಾದರೆ ಅಂತಹ ಪ್ರಕರಣಗಳಲ್ಲಿ ನಿರ್ಧರಿಸಿದ ಮೊತ್ತವನ್ನು ಸದರಿ ನಿಧಿಗೆ ಜಮೆ ಮಾಡತಕ್ಕದ್ದು.<br>2. ನಿಧಿಗೆ ಜಮೆಗೊಳಿಸಿದ ಮೊತ್ತದ ಹೂಡಿಕೆಯಿಂದ ಗಳಿಸಿದ ಯಾವುದೇ ಆದಾಯ ಮತ್ತು<br>3. ಇದರಿಂದ ಸ್ವೀಕರಿಸಿದ ಯಾವುದೇ ಇತರೆ ಹಣಗಳು. |
| ಆ) | ರಾಜ್ಯದಲ್ಲಿ ಈ ಗ್ರಾಹಕರ ಕಲ್ಯಾಣ ನಿಧಿಯನ್ನು ನಿರ್ವಹಣೆ ಮಾಡಲು ಇರುವ ವ್ಯವಸ್ಥೆ ಯಾವುದು; ಮತ್ತು ಈ ವ್ಯವಸ್ಥೆಯ ಕಾರ್ಯೋದ್ದೇಶಗಳು ಯಾವುವು;<br>(ಪೂರ್ಣ ಮಾಹಿತಿ ನೀಡುವುದು) | ಈ ನಿಧಿಯನ್ನು ನಿರ್ವಹಿಸಲು ಒಂದು ವ್ಯವಸ್ಥೆಯನ್ನು ರೂಪಿಸಲಾಗಿದೆ. ಅದರಂತೆ ಮಹಾಲೇಖಪಾಲರ ಕಛೇರಿಯಲ್ಲಿ ನಿರ್ವಹಿಸುವ ಸಾರ್ವಜನಿಕ ಖಾತೆ (public Accounts) 8229-00-200-0-065ಯಲ್ಲಿ ಸದರಿ ನಿಧಿಯಲ್ಲಿನ ಹಣವನ್ನು ಜಮೆ ಮಾಡಲಾಗುವುದು. ಈ ಹಣವನ್ನು ಸರ್ಕಾರದ ಅನುದಾನ ಅಂದಾಜುಗಳ ಮೂಲಕ ಸ್ವೀಕೃತಿ ಮತ್ತು ವೆಚ್ಚಗಳಿಗೆ ಬೇಕಾಗುವ ಅನುದಾನವನ್ನು ಒದಗಿಸಲಾಗುವುದು ಮತ್ತು ಮಹಾಲೇಖಪಾಲರು ಸೂಕ್ತ ಹೊಂದಾಣಿಕೆಯನ್ನು ಕೈಗೊಳ್ಳುವರು. |

....2

| | | |
|---|---|---|
| ಇ) | ರಾಜ್ಯದಲ್ಲಿ ಗ್ರಾಹಕರ ಕಲ್ಯಾಣ ನಿಧಿಗೆ ಸಂಗ್ರಹವಾಗಿರುವ ಮೊತ್ತವೆಷ್ಟು ಮತ್ತು ಇದುವರೆಗೂ ಈ ನಿಧಿಯನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳಲಾಗಿದೆ;<br>(ಪೂರ್ಣ ವಿವರ ನೀಡುವುದು) | ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ವಯ ಸೃಜಿಸಲಾದ ಗ್ರಾಹಕರ ಕಲ್ಯಾಣ ನಿಧಿಯಲ್ಲಿ 2019-20 ರಿಂದ 2020-21ರ ಸಾಲಿನಲ್ಲಿ ಒಟ್ಟು ರೂ. 28,44,382ಗಳು ಸಂಗ್ರಹಿಸಲಾಗಿದೆ. ಈವರೆಗೆ ಯಾವುದೇ ಕ್ಲೇಮ್ ಬರದೇ ಇರುವುದರಿಂದ ಸದರಿ ನಿಧಿಯ ಬಳಕೆಯಾಗಿರುವುದಿಲ್ಲ. |
| ಈ) | ರಾಜ್ಯದಲ್ಲಿರು ಗ್ರಾಹಕರ ನಿಧಿ, ಕಲ್ಯಾಣ ನಿಧಿಯಲ್ಲಿ ಸಂಗ್ರಹಣೆ ಮೊತ್ತವು ಪ್ರತ್ಯೇಕವಾಗಿ ಇಡಲಾಗಿದೆಯೇ;<br>(ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ಲೆಕ್ಕಶೀರ್ಷಿಕೆ 0006-00-101-1-01 ಅಡಿಯಲ್ಲಿ ಜಮೆಯಾಗಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 2043-00-797-0-01-261 ಮುಖಾಂತರ 8229-00-200-0-65 ಸಾರ್ವಜನಿಕ ಖಾತೆಗೆ ಮಹಾಲೇಖಪಾಲರ ಮೂಲಕ ಹೊಂದಾಣಿಕೆ ಮಾಡಲಾಗುವುದು. ಮರುಪಾವತಿಗಾಗಿ ಅರ್ಜಿಗಳು ಬಂದಾಗ 2043-00-800-0-13-066 ಈ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೆಚ್ಚವನ್ನು ಭರಿಸಲಾಗುವುದು ಮತ್ತು ಸಾರ್ವಜನಿಕ ಖಾತೆಗೆ ವರ್ಗಾಯಿಸಲಾಗುವುದು. ಈ ವ್ಯವಸ್ಥೆಯ ಮೂಲಕ ಪ್ರತ್ಯೇಕವಾಗಿ ನಿಧಿಯನ್ನು ನಿರ್ವಹಿಸಲಾಗುತ್ತಿದೆ. |

ಸಂಖ್ಯೆ: ಆಇ 15 ಸಿಎಸ್ಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.